**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,**
**ನ್ಯಾಯಾಲಯ,ಹೊಸದುರ್ಗ.**

**ಅಸಲು ದಾವಾ ಸಂಖ್ಯೆ. 233/2022 ದಿನಾಂಕಃ 20-9-2024**

**ಡಿ.ಡಬ್ಲ್ಯೂ:1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು ಃ ವಾದಿಯ ಪರ ಶ್ರೀ ಎಸ್ ಎಂ ವಕೀಲರಿಂದ**

1. ವಾದಿ ಸಿದ್ದೇಶ್ ರವರ ತಂದೆ ನಾಗರಾಜಪ್ಪ ನನಗೆ ಮಾವನಾಗಬೇಕು. ಸದರಿ ನನ್ನ ಮಾವ ನಾಗರಾಜಪ್ಪ ಮಾನಸಿಕ ಅಸ್ವಸ್ಥನಾಗಿದ್ದ ಕಾರಣ ಆತನ ತಾಯಿ ಆತನ ಜೊತೆಗೆ ಜೀವಿಸಿದ್ದರು ಎಂದರೆ ಸುಳ್ಳು. ನನ್ನ ಅಜ್ಜಿ ಮರಣ ಹೊಂದಿದ ನಂತರ ನಾಗರಾಜಪ್ಪನವರನ್ನು ಆತನ ಹೆಂಡತಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಈ ದಾವೆಯನ್ನು ನನ್ನ ಮಾವ ಸಿದ್ದೇಶ್ ದಾಖಲೆಸಿರುತ್ತಾರೆ. ಸಿದ್ದೇಶ್ ಪರವಾಗಿ ಆತನ ಹೆಂಡತಿ ಸಾವಿತ್ರಮ್ಮ ಈ ದಾವೆಯನ್ನು ತಂದಿರುತ್ತಾರೆ ಎಂದರೆ ಸರಿ. ಸದರಿ ಸಾವಿತ್ರಮ್ಮ ವಾದಿ ಸಿದ್ದೇಶ್ ರವರು ಮಾನಸಿಕ ಅಸ್ವಸ್ಥ ಎಂದು ಈ ದಾವೆಯನ್ನು ತಂದಿರುತ್ತಾರೆ. ವಾದಿ ಸಿದ್ದೇಶ್ 2007 ರಿಂದ ಮಾನಸಿಕ ಅಸ್ವಸ್ಥತೆ ಬಗ್ಗೆ ಚಿಕಿತ್ಸೆ ಪಡೆಯುತ್ತಿರುತ್ತಾರೆ ಎಂದರೆ ಸುಳ್ಳು.

2. ವಾದಿ ಸಿದ್ದೇಶ್ ಮಾನಸಿಕ ಅಸ್ವಸ್ಥರು ಎಂದು ಸರ್ಕಾರದಿಂದ ಪ್ರಮಾಣಪತ್ರ ಪಡೆದಿರುತ್ತಾರೆ ಎಂದರೆ ಸುಳ್ಳು. ನಾನು ಸದರಿ ಪ್ರಮಾಣಪತ್ರವನ್ನು ನೋಡಿರುವುದಿಲ್ಲ. ವಾದಿ ಸಿದ್ದೇಶ್ ಶೇಕಡಾ 70 ರಷ್ಟು ಮಾನಸಿಕ ಅಸ್ವಸ್ಥರು ಎಂದು ವೈದ್ಯರು ಪ್ರಮಾಣಪತ್ರ ನೀಡಿರುತ್ತಾರೆ ಎಂದರೆ ಸುಳ್ಳು. ಸದರಿ ಪ್ರಮಾಣಪತ್ರದ ಆಧಾರದ ಮೇರೆಗೆ ವಾದಿಗೆ ಸರ್ಕಾರದಿಂದ ಹಣ ಸಹಾಯ ಮಂಜೂರಾತಿಯಾಗಿರುತ್ತದೆ ಎಂದರೆ ಸುಳ್ಳು. ವೈದ್ಯರು ನೀಡಿದ ಪ್ರಮಾಣಪತ್ರ ಸುಳ್ಳು ಇರುತ್ತದೆ ಎಂಬುದರ ಬಗ್ಗೆ ನಾನು ಪರಿಶೀಲನೆ ಮಾಡಲು ಪ್ರಯತ್ನ ಪಟ್ಟಿರುವುದಿಲ್ಲ.

3. ಈ ಹಿಂದೆ ವಾದಿಯ ತಾಯಿ ದಾಖಲಿಸಿದ್ದ ಒಂದು ಸಿವಿಲ್ ಮಿಸ್ ಪ್ರಕರಣದಲ್ಲಿ ವಾದಿಗೆ 6 ನೇ ವರ್ಷದಿಂದ ಮಾನಸಿಕ ಅಸ್ವಸ್ಥತೆ ಇತ್ತು ಎಂದು ಅರ್ಜಿಯಲ್ಲಿ ಬರೆದಿರುತ್ತಾರೆ ಎಂಬುದನ್ನು ನಾನು ತಿಳಿದುಕೊಂಡಿರುವುದಿಲ್ಲ.

ಸದರಿ ವಾದಿಗೆ ಮಾನಸಿಕ ಅಸ್ವಸ್ಥತೆ ಇರುವುದಿಲ್ಲ ಎಂಬುದರ ಬಗ್ಗೆ ನಾನು ದಾಖಲಾತಿಯನ್ನು ಹಾಜರು ಮಾಡಿರುವುದಿಲ್ಲ. ವಾದಿಯನ್ನು ಆತನ ತಾಯಿ ಆಕೆ ಜೀವಂತ ಇರುವವರೆಗೂ ನೋಡಿಕೊಳ್ಳುತ್ತಿದ್ದರು ಎಂದರೆ ಸುಳ್ಳು. ಆತನ ಪರವಾಗಿ ಆತನ ತಾಯಿಯೇ ಎಲ್ಲಾ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ವಾದಿಯ ತಾಯಿಯ ಮರಣಾನಂತರ ವಾದಿಯ ಹೆಂಡತಿ ಆತನ ಆಸ್ಪತ್ರೆ, ಆರೋಗ್ಯ ಇತರೆ ಕೆಲಸಗಳನ್ನು ನೋಡಿಕೊಳ್ಳುತ್ತಿರುತ್ತಾರೆ ಎಂದರೆ ಸುಳ್ಳು. ವಾದಿಯ ಪರವಾಗಿ ಎಲ್ಲಾ ಕೆಲಸ ಕಾರ್ಯಗಳನ್ನು ಮತ್ತು ವ್ಯವಹಾರಗಳನ್ನು ಸಾವಿತ್ರಮ್ಮ ನೋಡಿಕೊಳ್ಳುತ್ತಿರುತ್ತಾರೆ ಎಂದರೆ ಸರಿಯಲ್ಲ.

**ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**